**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಪಾಂಡವಪುರ.**

**ಎಂ ವಿ ಸಿ 1776/2023**

**ಆರ್ ಡಬ್ಲ್ಯೂ 4**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಸೈಫ್‌ವುದ್ದೀನ್ ಖಾನ್ | **ಉದ್ಯೋಗ** | ಹಿರಿಯ ಮೋಟಾರು ವಾಹನ ನಿರೀಕ್ಷಕರು, ಪ್ರಾದೇಶಿಕ ಸಾರಿಗೆ ಕಚೇರಿ, ಕೋಲಾರ |
| **ತಂದೆಯ ಹೆಸರು** | ಲೇಟ್ ಅಸಿವುದ್ದೀನ್ ಖಾನ್ | **ವಾಸಸ್ಥಳ** | ಕೋಲಾರ |
| **ವಯಸ್ಸು** | 49 ವರ್ಷ | | |

ಸಾಕ್ಷಿಗೆ ದಿನಾಂಕ 02.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಜಿ ಕೆ ಪಿ ವಕೀಲರ ಪರವಾಗಿ ಶ್ರೀಮತಿ ಸಿ ವಿ ವಕೀಲರಿಂದಃ**

ಜುಲೈ 2019 ರಿಂದ ಜೂನ್ 2024 ರವರೆಗೆ ಮೋಟಾರು ವಾಹನ ನಿರೀಕ್ಷಕರಾಗಿ ಮಂಡ್ಯ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17.07.2023 ರಂದು ಪೊಲೀಸ್ ಇನ್‌ಸ್ ಪೆಕ್ಟರ್, ಕೆ ಆರ್ ಸಾಗರ ಪೊಲೀಸ್ ಠಾಣೆ ರವರ ಮನವಿ ಮೇರೆಗೆ ಅದೇ ದಿನ ಸಂಜೆ 4.30 ಗಂಟೆಗೆ ಕೆ ಆರ್ ಸಾಗರ ಪೊಲೀಸ್ ಠಾಣೆ ಆವರಣದಲ್ಲಿ ಅಪಘಾತಕ್ಕೆ ಸಂಬಂಧಪಟ್ಟ ಎರಡು ವಾಹನಗಳನ್ನು ಪರಿಶೀಲಿಸಿದ್ದು ಒಂದು ವಾಹನದ ಸಂಖ್ಯೆ ಕೆಎ 11 ಇಡಿ 5573 ಮೋಟಾರು ಸೈಕಲ್ ವಿತ್ ಗೇರ್ ಯಮಹಾ ಕ್ರಕ್ಸ್ ಮೆರೂನ್ ಕಲರ್ ಹಾಗೂ ಕೆಎ 09 ಜೆಡ್ 1122 ಎಲ್ ಎಂವಿ ಮಾರುತಿ ಸುಜುಕಿ ವ್ಯಾಗನರ್ ಗೋಲ್ಡ್‌ನ್ ಸಿಲ್ವರ್ ಕಲ್ಲರ್ ಕಾರ್ ಆಗಿದ್ದು ಅವುಗಳಲ್ಲಿ ಜಖಂಗಳು ಕಂಡು ಬಂದಿದ್ದು ವರದಿಯಲ್ಲಿ

ನಮೂದಿಸಿದ್ದೇನೆ. ಆ ಎರಡೂ ವಾಹನಗಳನ್ನು ಚಲಾಯಿಸಿ ನೋಡಿ ಅದರ ಆಡೆತಡೆಗಳು ಸುಸ್ಥಿತಿಯಲ್ಲಿ ಇದ್ದುದು ಕಂಡು ಬಂದಿತು. ಈ ಅಪಘಾತವು ಯಾವುದೇ ಯಾಂತ್ರಿಕ ದೋಷದಿಂದ ಆಗಿಲ್ಲ ಎಂದು ಕಂಡು ಬಂದಿತು.

(2 ನೇ ಎದುರುದಾರರ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿದ್ದು, ಅವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ ಕೆ ಪಿ ವಕೀಲರ ಪರವಾಗಿ ಶ್ರೀಮತಿ ಸಿ ವಿ ವಕೀಲರಿಂದಃ**

ನಾನು ಇಂದು ನ್ಯಾಯಾಲಯಕ್ಕೆ ಐಎಂವಿ ವರದಿಯನ್ನು ತಂದಿಲ್ಲ. ಸಾಕ್ಷಿ ಮುಂದುವರಿದು ಐಎಂವಿ ವರದಿಯನ್ನು ತಾನು ತನಿಖಾಧಿಕಾರಿಗೆ ಸಲ್ಲಿಸಿರುವುದಾಗಿ ಹೇಳುತ್ತಾರೆ. ಈಗ ನನಗೆ ತೋರಿಸಿದ ದಾಖಲೆಯು ಸದರಿ ಐಎಂವಿ ವರದಿಯ ದೃಢೀಕೃತ ನಕಲು ಆಗಿದೆ. ಸದರಿ ದಾಖಲೆಯನ್ನು ನಿಶಾನೆ ಪಿ 11 ಎಂದು ಗುರುತಿಸಲಾಯಿತು. ಕೆಎ 09 ಜೆಡ್ 1122 ಎಲ್ ಎಂವಿ ಮಾರುತಿ ಸುಜುಕಿ ವ್ಯಾಗನರ್ ಗೋಲ್ಡ್ ನ್ ಸಿಲ್ವರ್ ಕಲ್ಲರ್ ಕಾರನ್ನು ನಾನು ತಪಾಸಣೆ ಮಾಡಿದ್ದೇನೆ. ಸದರಿ ಕಾರಿಗೆ ಕಾಣಿಸುವಂತಹ ಯಾವುದೇ ಜಖಂಗಳು ಯಾವುದು ಕಂಡು ಬಂದಿರದೆ ಇದ್ದ ಕಾರಣ ವರದಿಯಲ್ಲಿ ಯಾವುದೇ ಜಖಂಗಳು ಕಂಡು ಬಂದಿಲ್ಲ ಎಂದು ನಮೂದಿಸಿದ್ದೇನೆ. ಸದರಿ ಕಾರಿಗೆ ನೋಂದಣಿ ಸಂಖ್ಯೆಯ ಫಲಕವು ಮುಂಭಾಗ ಮತ್ತು ಹಿಂಭಾಗ ಎರಡು ಕಡೆ ಇತ್ತು. ಮುಂಭಾಗದ ನೋಂದಣಿ ಫಲಕ ಇರುವ ಜಾಗದಲ್ಲಿ ಯಾವುದೇ ಜಖಂಗಳು ಕಂಡು ಬಂದಿಲ್ಲ ಎಂದರೆ ನನಗೆ ಸದರಿ ಕಾರಿನ ಯಾವುದೇ ಭಾಗದಲ್ಲಿ ಜಖಂಗಳು ಕಂಡು ಬಂದಿರಲಿಲ್ಲ. ಸದರಿ ಕಾರು ಅಥವಾ ಬೇರೆ ಯಾವುದೇ ವಾಹನ ಸದರಿ ಕಾರಿನ ನಂಬರು ಪ್ಲೇಟ್ ಭಾಗಕ್ಕೆ ಡಿಕ್ಕಿಪಡಿಸಿದಾಗ ಆ ನಂಬರು ಪ್ಲೇಟ್ ತಗ್ಗಾಗಿರುತ್ತದೆ (ಬಾಗಿರುತ್ತದೆ) ಎಂದರೆ ಹಾಗೆ ಆಗಬೇಕು ಎಂದೇನು ಇಲ್ಲ.

ಮುಂಭಾಗದ ನಂಬರು ಪ್ಲೇಟ್ ಜಖಂಗೊಂಡಿರಲಿಲ್ಲ ಎಂದರೆ ಸರಿ. ನಂಬರು ಪ್ಲೇಟ್ನ್ನು ಎರಡು ಕಡೆ ನಟ್ ಅಂಡ್ ಬೋಲ್ಟ್ ಸಹಾಯದಿಂದ ಜೋಡಿಸಿರುತ್ತಾರೆ ಎಂದರೆ ಸರಿ. ನಂಬರು ಪ್ಲೇಟ್ ಪ್ಲಾಸ್ಟಿಕ್ ಅಥವಾ ಮೆಟಲ್‌ದು ಎಂದು ನನಗೆ ನೆನಪಿಲ್ಲ. ನಂಬರು ಪ್ಲೇಟ್ ಮೆಟಲ್‌ದು ಆಗಿದ್ದರೆ ಅದು ಮುರಿದು ಹೋಗುವುದಿಲ್ಲ ಎಂದರೆ ಸರಿ. ಪ್ಲಾಸ್ಟಿಕ್ ನಂಬರು ಪ್ಲೇಟ್ ಆಗಿದ್ದರೆ ಅದು ಮಧ್ಯ ಭಾಗದಲ್ಲಿ ಎರಡು ತುಂಡಾಗುತ್ತದೆ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ. ನಂಬರು ಪ್ಲೇಟ್ ಪ್ಲಾಸ್ಟಿಕ್‌ದು ಆಗಿದ್ದರೆ ಅಪಘಾತ ಉಂಟಾದಾಗ ಅದು ತುಂಡಾದರೂ ಸಹ ತುಂಡಾದ ಭಾಗಗಳು ಕೆಳಗೆ ಬೀಳದೆ ನಟ್ ಮತ್ತು ಬೋಲ್ಟ್‌ಗಳ ಸಹಾಯದಿಂದ ನೇತಾಡುತ್ತದೆ ಎಂದರೆ ನಾನು ಕಾರನ್ನು ತಪಾಸಣೆ ಮಾಡಿದಾಗ ನಂಬರು ಪ್ಲೇಟ್ ಗಳು ಸುಸ್ಥಿತಿಯಲ್ಲಿದ್ದವು.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ ಎಸ್ ಎಂ ವಕೀಲರಿಂದಃ</u>**

ದಿನಾಂಕ 17.07.2023 ರಂದು ಕೆ ಆರ್ ಸಾಗರ ಪೊಲೀಸ್ ಠಾಣಾ ಆವರಣದಲ್ಲಿ ಕಾರನ್ನು ತಪಾಸಣೆ ಮಾಡಿ ವರದಿ ನೀಡಿದಾಗ ಆ ಕಾರಿನ ನಂಬರು ಪ್ಲೇಟ್ ಬಗ್ಗೆ ನಿಖರವಾಗಿ ವರದಿಯಲ್ಲಿ ನಮೂದು ಮಾಡಿಲ್ಲ. ಈಗ ನನಗೆ ತೋರಿಸಿದ ಛಾಯಾಚಿತ್ರಗಳಲ್ಲಿ ಕಂಡು ಬರುವ ಕಾರೇ ನಾನು ಅಂದು ತಪಾಸಣೆ ಮಾಡಿದ ಕಾರು ಆಗಿದೆ ಎಂದರೆ ಸರಿ. ಎರಡು ಛಾಯಾಚಿತ್ರಗಳುಳ್ಳ ಹಾಳೆಯ ದೃಢೀಕೃತ ನಕಲನ್ನು ನಿಶಾನೆ ಪಿ 12 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಸದರಿ ಛಾಯಾಚಿತ್ರದಲ್ಲಿ ಕಂಡು ಬರುವ ಕಾರಿನ ಮುಂಭಾಗದಲ್ಲಿ ನೋಂದಣಿ ಸಂಖ್ಯೆಯ ಫಲಕ ಇಲ್ಲ ಎಂದರೆ ಸರಿ. ಆ ಕಾರನ್ನು ಕೆ ಆರ್ ಸಾಗರ ಪೊಲೀಸ್ ಠಾಣೆರವರು ಕ್ರೈಂ ನಂ. 135/2023 ಕ್ಕೆ ಸಂಬಂಧಿಸಿದಂತೆ ಯಾವಾಗ ಅಮಾನತ್ತುಪಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ನಾನು ದಿನಾಂಕ 17.07.2023 ರಂದು ಸದರಿ ಕಾರನ್ನು ತಪಾಸಣೆ ಮಾಡಿದ ಕಾಲದಲ್ಲಿಯೂ ಸಹ ಆ ಕಾರಿನ ಮುಂಭಾಗದ ನಂಬರು ಪ್ಲೇಟ್ ಇರಲಿಲ್ಲವಾದರೂ ನಾನು ತಪಾಸಣಾ ವರದಿಯಲ್ಲಿ ಆ ಸಂಗತಿಯನ್ನು ನಮೂದು ಮಾಡಿಲ್ಲ ಎಂದರೆ ನಾನು ಕಾರನ್ನು

ಪರಿಶೀಲನೆ ಮಾಡಿದಾಗ ಆ ಕಾರಿನ ಹಿಂಭಾಗ ಮತ್ತು ಮುಂಭಾಗ ಎರಡು ಕಡೆ ನೋಂದಣಿ ಫಲಕದ ಸಂಖ್ಯೆಗಳು ಇದ್ದವು. ನಾನು ಕಾರನ್ನು ತಪಾಸಣೆ ಮಾಡುವ ಮೊದಲು ಅಪರಾಧ ಸಂಖ್ಯೆ 135/2023 ರ ದೂರು ಅಥವಾ ಪ್ರಥಮ ವರ್ತಮಾನ ವರದಿಯನ್ನು ಪರಿಶೀಲನೆ ಮಾಡಿರಲಿಲ್ಲ. ವಾಹನಗಳ ನಡುವೆ ಸಂಭವಿಸುವ ಅಪಘಾತದ ತೀವ್ರತೆಯ ಆಧಾರದ ಮೇಲೆ ಆ ವಾಹನಗಳಿಗೆ ಜಖಂ ಉಂಟಾಗುತ್ತದೆ ಎಂದರೆ ಸರಿ.

ನನ್ನ 20 ವರ್ಷಗಳ ಸೇವಾನುಭವದ ಪ್ರಕಾರ ಜಖಂಗಳು ಇಲ್ಲದೆಯೇ ವಾಹನ ಅಪಘಾತ ಸಂಭವಿಸುವ ಸಾಧ್ಯತೆ ಇದೆ. ಈ ಪ್ರಸ್ತುತ ಪ್ರಕರಣದಲ್ಲಿಯೂ ಸಹ ಸ್ಕೂಟರ್ ಹಾಗೂ ಕಾರಿನ ನಡುವೆ ಆ ರೀತಿಯ ಅಪಘಾತದಿಂದ ಜಖಂಗಳು ಆಗದೆ ಇರುವ ಸಾಧ್ಯತೆಗಳು ಇರಬಹುದು.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**